**CC 1115/2021**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1115/2021

**ಸಿ ಡಬ್ಲೂ** -3

**ಪಿ ಡಬ್ಲೂ** -2

**ಸಾಕ್ಷಿಯ ಹೆಸರು -** **ಮೊಹಮದ್ ಅಸ್ಲಂ**

**ತಂದೆಯ ಹೆಸರು -** **ಇಬ್ರಾಹಿಂ ಸಾಬ್**

**ವಯಸ್ಸು -** 46 **ವರ್ಷಗಳು**

**ಉದ್ಯೋಗ -** **ಟಿವಿ ಮೆಕಾನಿಕ್**

**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 04-12-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಮದುವೆಯಾದ ಸ್ಥಳದ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **3** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ **3**(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಪೋಲಿಸರು ನನ್ನ ಮನೆಗೆ ಈಗ್ಗೆ **4-5** ವರ್ಷಗಳ ಹಿಂದೆ ಬಂದು ಪಡೆದಿರುತ್ತಾರೆ. ಆಗ ಪೋಟೋ ತೆಗೆಸಿಕೊಳ್ಳಲು ಹೇಳಿದ್ದರಿಂದ ಸಹಿಮಾಡಿ ಪೋಟೋ ತೆಗೆಸಿಕೊಂಡಿರುತ್ತೇನೆ. ನಿಪಿಃ **3** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ. ನಿಪಿಃ **4** ರ ಪೋಟೊಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ **02-02-2021** ರಂದು ಪೋಲಿಸರು ನನ್ನನ್ನು ಮತ್ತು ಚಾಸಾ **-2** ರವರನ್ನು ಚಾಸಾ **-1** ರವರು ತೋರಿಸಿದ್ದ ಮದುವೆ ಆದ ಸ್ಥಳ ಅಂದರೆ ನೂರಾನಿ ಮಸೀದಿ ಹಿಂದುಗಡೆ ಇರುವ ಮನೆಗೆ ಕರೆದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ನಮ್ಮ ಸಮಕ್ಷಮ ಸದರಿ ಸ್ಥಳದಲ್ಲಿ ನಿಪಿಃ **3** ರಂತೆ ಪಂಚನಾಮೆ ಮಾಡಲಾಗಿತ್ತು ಅಂದರೆ ಸರಿಯಲ್ಲ. ಆಗಲೇ ನಿಪಿಃ **4** ರ ಪೋಟೊ ತೆಗೆಯಲಾಗಿತ್ತು ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಆಗಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ.ವಾಯ್ ವಕೀಲರಿಂದಃ ಇಲ್ಲಾ**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.